# ಪತನ

ನಮ್ಮ ಹಳಗನ್ನಡದ ಕವಿ ನಾಗಚಂದ್ರ 'ರಾಮಚಂದ್ರ ಚರಿತ ಪುರಾಣಂ' ಎಂಬ ಕಾವ್ಯವನ್ನು ಬರೆದಿದ್ದಾನೆ. ಕಾವ್ಯವು ಶ್ರೀರಾಮನ ಹೆಸರಿನಲ್ಲಿದ್ದರೂ ಇಲ್ಲಿ ಪ್ರತಿನಾಯಕನಾದ ರಾವಣನೇ ರಾಮನಿಗಿಂತ ಗಮನ ಸೆಳೆಯುತ್ತಾನೆ. ರಾವಣನು ಉದಾತ್ತ, ಶೀಲವಂತ ಮತ್ತು ಸಚ್ಚಾರಿತ್ರವುಳ್ಳವನು. ಅವನದು ಧೀರ ನಡೆ, ಅವನ ಚೆಲುವಿಕೆಗೆ ಮನಸೋತ ದೇವ ಗಂಧರ್ವ ರಾಕ್ಷಸ ಸುಂದರಿಯರು ಪ್ರೇಮಭಿಕ್ಷೆಯನ್ನು ಬೇಡಿ ಅವನ ಬಳಿ ಬಂದು ಅಂಗಲಾಚಿದರೂ ವಿಚಲಿತನಾಗದ ವ್ಯಕ್ತಿತ್ವ ಅವನದು. ಆದರೆ ಯಾವುದೋ ಸಂದರ್ಭದಲ್ಲಿ ನಡೆಯುವ ಚಿತ್ತಜಾರುವಿಕೆಯ ಕಾರಣದಿಂದಾಗಿ ಅವನ ಪತನ ಆರಂಭವಾಗುತ್ತದೆ. ಕವಿ ಅವನು ನಂಬಿದ ಸಿದ್ಧಾಂತಕ್ಕನುಗುಣವಾಗಿ ಆ ಪತನವನ್ನು ವಿಧಿಲಿಖಿತವೆನ್ನುತ್ತಾನೆ. ಪಂಚವಟಿಯಲ್ಲಿ ನಾರುಡುಗೆಯಲ್ಲಿದ್ದ ಸೀತೆಯನ್ನು ಕಂಡ ತಕ್ಷಣ ಅವನ ಮನಸ್ಸು ವಿಚಲಿತವಾಗುತ್ತದೆ. ಅಲ್ಲಿಂದ ಪ್ರಾರಂಭವಾದ ಅವನ ಜಾರುವಿಕೆ– ಅವನ ಬಂಧು ಬಳಗವನ್ನೆಲ್ಲಾ ಆಹುತಿ ತೆಗೆದುಕೊಳ್ಳುತ್ತದೆ.

ರಾವಣನ ಪತನಕ್ಕೆ ಸೀತೆಯನ್ನು ಕಂಡಾಗ ಅವನ ಎದೆಯಲ್ಲಿ ಹೊಕ್ಕ ಮನ್ಮಥ ಬಾಣವು ಕಾರಣವೆಂದು ನಾಗಚಂದ್ರ ಹೇಳುತ್ತಾನೆ. ಅಂದರೆ ಮನುಷ್ಯನ ಬಾಳಿನಲ್ಲಿ ಪತನಕ್ಕೆ ಕಾರಣವಾಗುವ ಹಲವಾರು ಅಂಶಗಳಲ್ಲಿ ಹೆಣ್ಣು (ಗಂಡು) ಕೂಡ ಒಂದೆಂದು ತಿಳಿದಾಯಿತು. ಸಂಸ್ಕೃತ ಸುಭಾಷಿತವೊಂದು ಮನುಷ್ಯನ ಪತನಕ್ಕೆ ಕಾರಣವಾಗುವ ಅಂಶಗಳನ್ನು ಹೀಗೆ ಗುರ್ತಿಸುತ್ತದೆ:

ಯೌವನಂ ಧನಸಂಪತ್ತಿಃ ಪ್ರಭುತ್ವಂ ಅವಿವೇಕತಾ।<br>
ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯ॥

ಯೌವನದ ಅಹಂಕಾರದಲ್ಲಿ ವ್ಯಕ್ತಿ ಮಾಡಬಾರದ್ದನ್ನು ಮಾಡಿ ಪತನಕ್ಕೀಡಾಗುತ್ತಾನೆ; ಧನ ಮದದಲ್ಲಿ ಅವನು ಅಮಾನವೀಯವಾಗಿ ನಡೆದುಕೊಂಡು ಕ್ರೂರಿಯಾಗುತ್ತಾನೆ. ಅಧಿಕಾರದ ಗದ್ದುಗೆಯನ್ನೇರಿದಾಗಲಂತೂ ಅದರ ಮದದಿಂದ ಭ್ರಷ್ಟತೆಯನ್ನೆಸಗಿ ಸಮಾಜ ಘಾತಕನಾಗುತ್ತಾನೆ; ಬಡಬಗ್ಗರ, ಸಾಮಾನ್ಯರ ರಕ್ತ ಹೀರಿ ತನ್ನ ದಾಹ ಹಿಂಗಿಸಿಕೊಳ್ಳುತ್ತಾನೆ. ಇವುಗಳ ಜೊತೆ ಯುಕ್ತಾ ಯುಕ್ತ ವಿವೇಕವಿಲ್ಲದೆ ಎಸಗುವ ಕೆಲಸಗಳು ಕೂಡ ವ್ಯಕ್ತಿಯನ್ನು ಪ್ರಪಾತಕ್ಕೆ ನೂಕುತ್ತವೆ. ಇವುಗಳಲ್ಲಿ ಒಂದೊಂದು ಮಾನವನ ಪತನಕ್ಕೆ ಕಾರಣವಾಗಿರುವಾಗ, ಇವು ನಾಲ್ಕೂ ಒಬ್ಬನಲ್ಲೇ ಒಡಮೂಡಿದರೆ ಎಂಥ ಮಹಾ ಪತನವಾಗಬಹುದು? ಎಂಥ ಅನರ್ಥವಾಗಬಹುದು? ಎಂದು ಸುಭಾಷಿತಕಾರ ಬೆರಗು ವ್ಯಕ್ತಪಡಿಸುತ್ತಾನೆ. ನಿಜ, ಕೆಲವು ಘಾತಕರಲ್ಲಿ ಇವು ನಾಲ್ಕೂ ಸೇರಿಕೊಂಡು ಮಾಡಬಾರದ ಅನರ್ಥವನ್ನು ಮಾಡಿಸುತ್ತವೆ. ಜಗತ್ತಿನ ಅತ್ಯಂತ ಕ್ರೂರ ಸರ್ವಾಧಿಕಾರಿಗಳಲ್ಲಿ ಈ ಗುಣಗಳನ್ನು ಕಾಣಬಹುದು. ಅವರ ಅಂತ್ಯವು ಕೂಡ ದಾರುಣವಾಗಿರುವುದರ ಮರ್ಮವನ್ನು ಅರ್ಥ ಮಾಡಿಕೊಳ್ಳಬೇಕು. ಇಂಥವರಿಂದ ಪಡಬಾರದ ಪಾಡನ್ನು, ನೋವನ್ನು ಅನುಭವಿಸಿದ ಸಮಾಜ ತನ್ನ ಸಹನೆಯನ್ನು ಕಳೆದುಕೊಂಡು ಇವರನ್ನು ನುಂಗಿ ನೊಣೆಯುತ್ತದೆ. ಇದು ಸೇಡಿನ ಕ್ರಿಯೆಯಲ್ಲ. ಪ್ರಕೃತಿ ಸಹಜ ಕ್ರಿಯೆ. ಹೆಚ್ಚು ಮೆರೆದ ಮಕ್ಕಳನ್ನು ನಿಯಂತ್ರಿಸುವ ಪರಿ.

ಮದ, ಮತ್ಸರ, ಕಾಮ, ಕ್ರೋಧ, ಲೋಭ, ಮೋಹ– ಈ ಅರಿಷಡ್ವರ್ಗಗಳು ವಿವೇಕ, ವಿವೇಚನೆ ಇಲ್ಲದಿದ್ದಾಗ ಮನುಷ್ಯನನ್ನು ದಾರಿತಪ್ಪಿಸುತ್ತವೆ. ಇವು ಮನುಷ್ಯನನ್ನು ತಪ್ಪು ಮಾರ್ಗಕ್ಕೆ ಕರೆದೊಯ್ಯುತ್ತವೆ, ಅನೈತಿಕ ನೆಲೆಗೆ ಮುಟ್ಟಿಸುತ್ತವೆ ಎಂದು ತಕ್ಷಣ ತೀರ್ಮಾನಕ್ಕೆ ಬರಬಾರದು. ಅವುಗಳನ್ನು ಬಳಸುವಾಗ ಉಚಿತಾನುಚಿತ ವಿವೇಕವಿದ್ದರೆ, ಅವು ಬದುಕಿಗೆ ರಂಗು ತರುತ್ತವೆ, ರುಚಿ ತರುತ್ತವೆ. ಮದ, ಮತ್ಸರ, ಕ್ರೋಧಗಳು ಅಹಂಕಾರವನ್ನು ಕಳೆದುಕೊಂಡು ಸ್ವಾಭಿಮಾನದ ರೂಪ ತಳೆಯಬೇಕು. ಕಾಮ ಮತ್ತು ಮೋಹಗಳು ಪ್ರೀತಿ– ಶೃಂಗಾರದ ಮಿತಿಯಲ್ಲಿ ವ್ಯವಹರಿಸುವಂತಾಗಬೇಕು. ಲೋಭವೆಂಬುದು ಅಂದಂದಿನ ಪಾಡನ್ನು ತೀರಿಸುವಷ್ಟರ ಮಟ್ಟಿಗಿದ್ದರೆ ಎನಿತು ಚೆನ್ನ? ಇವೆಲ್ಲವೂ ಆಗಬೇಕಾದರೆ ವ್ಯಕ್ತಿಯ ಒಳಗಿರುವ ಆತ್ಮ ಅರಿವಿನಿಂದ ಜಾಗೃತವಾಗಬೇಕು. ಆತ್ಮ ಜಾಗೃತವಾದಾಗ ಅರಿಷಡ್ವರ್ಗಗಳು ಪಳಗಿದ ಶ್ವಾನಗಳಂತೆ ಹೇಳಿದಷ್ಟು ಕೆಲಸ ಮಾಡುತ್ತವೆ. ಇವುಗಳಿಂದ ಮನುಷ್ಯ ಸಂಬಂಧಗಳು ಬೆಳೆಯುತ್ತವೆ. ಪ್ರೀತಿ, ಮೋಹಗಳು ಭಾವನೆಗಳ ಮೃದುತ್ವಕ್ಕೆ, ರಾಗಗಳ ನಿನಾದಕ್ಕೆ ಪ್ರೇರಣೆ ನೀಡಿ ಸಂಬಂಧಗಳನ್ನು ಸಮೀಪಗೊಳಿಸಿ ಗಟ್ಟಿಗೊಳಿಸುತ್ತವೆ. ಇವುಗಳಿಂದ ಜನಿಸುವ ಭಾವ ವಿಭಾವಗಳು ಇಲ್ಲದೆ ಹೋದರೆ ಬದುಕು ಬರಡಾಗುತ್ತದೆ; ಒಣಗಿದ ಕಾಷ್ಠವಾಗುತ್ತದೆ. ಹಸಿರು ಚಿಮ್ಮಿ, ಹೂ ಅರಳಿ, ಸುವಾಸನೆ ಬೀರಿ ನಳ ನಳಿಸಬೇಕಾದರೆ ರಾಗಗಳು ತಮ್ಮ ಮಿತಿಯಲ್ಲಿ, ಯುಕ್ತಾ ಯುಕ್ತ ಗೆರೆಯಲ್ಲಿ ಸದಾ ಮಿಡಿಯುತ್ತಲೇ ಇರಬೇಕು.

ತನ್ನ ಪಾಪಕರ್ಮಗಳಿಂದ, ಅವಿವೇಕ ನಡೆಯಿಂದ ಪತನಗೊಂಡ ವ್ಯಕ್ತಿ ಅಲ್ಲೇ ನರಳಬೇಕೆಂದೇನೂ ಇಲ್ಲ. ಕುವೆಂಪು ಅವರು ತಮ್ಮ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ 'ಪಾಪಿಗೂ ಉದ್ಧಾರ ಸಾಧ್ಯವಿದೆ' ಎಂದು ಹೇಳುತ್ತಾರೆ. ಉದ್ಧಾರಕ್ಕೆ ಇರುವ ಏಕೈಕ ಮಾರ್ಗ– ಆತ್ಮದ ಎಚ್ಚರ, ತನ್ಮೂಲಕ ಪಡುವ ಪ್ರಾಯಶ್ಚಿತ್ತತೆ. ತನ್ನ ತಪ್ಪನ್ನು ಅರಿತು ಅದನ್ನು ತಿದ್ದಿಕೊಂಡು ಸರಿದಾರಿಯಲ್ಲಿ ನಡೆದು ಮಾನವತೆಯನ್ನು ಅಪ್ಪಿಕೊಳ್ಳುವ ಯತ್ನವೇ ಅತ್ಯಂತ ಪುನೀತವಾದುದು. ಕುವೆಂಪು ಅವರ ಕಾವ್ಯದ ರಾವಣ ತನ್ನ ತಪ್ಪಿನ ಅರಿವನ್ನು ಮಾಡಿಕೊಂಡು, ಸೀತೆಯಲ್ಲಿ ಮಾತೃತ್ವವನ್ನು ಕಾಣುತ್ತಾನೆ. ಅವರ ಮಂಥರೆ ತಾನು ಮಾಡಿದ ತಪ್ಪಿನ ದೆಸೆಯಿಂದಾಗಿ ದುರಂತವನ್ನು ಅರ್ಥ ಮಾಡಿಕೊಂಡು, ಶ್ರೀರಾಮನನ್ನು ಕರೆತರಲು ಕಾಡಿಗೆ ಹೋಗಿ, ಅಲ್ಲೇ 'ರಾಮತ್ವ'ವನ್ನು ಪಡೆಯುತ್ತಾಳೆ. ಇದು ಪತನಗೊಂಡವರು ಪತಿತಪಾವನರಾಗುವ ರೀತಿ. ಅಂದರೆ ಈ ಸಮಾಜದಲ್ಲಿ ಬಿದ್ದವರೆಲ್ಲರೂ ಎದ್ದು ಬೆಳಕು ಕಾಣಲು ಅವಕಾಶವಿದೆ. ಅದೇ ಇಂದಿನ ಯುಗಧರ್ಮದ ಆಶಯ.

■ ಶಿಕಾಕು

# ಮಾತೇ ಮುತ್ತು

★ ಹೆಂಡತಿಯೆಡೆಗಿನ ಪ್ರೀತಿಯಲ್ಲಿ 'ಬಯಕೆ', ಮಗನೆಡೆ 'ಮಹಾತ್ವಾಕಾಂಕ್ಷೆ' ಕಂಡುಬಂದರೆ, ಮಗಳೆಡಗಿನ ಪ್ರೀತಿಯಲ್ಲಿ, ಮಾತುಗಳಲ್ಲಿ ಹೇಳಲಾರದ ಯಾವುದೋ ಅಪೂರ್ವ ಭಾವನೆಯಡಗಿರುತ್ತದೆ.

–ಜೋಸೆಫ್ ಅಡಿಸನ್

★ ನಿಮ್ಮ ಊರಿಗೆ ನಾನು ಏನನ್ನೂ ಕಲಿಸಲು ಬಂದಿಲ್ಲ. ಮಲಗಿರುವ ಮಂದಿಯನ್ನು ಎಬ್ಬಿಸಲು ಬಂದಿದ್ದೇನೆ. ಏಕೆಂದರೆ ಜೀವನ ಒಂದು ಜಾಗರಣೆಯೇ ಹೌದು.

–ಮುನಿಶ್ರೀ ತರುಣ ಸಾಗರ್ ಜಿ

★ ಐಶ್ವರ್ಯಕ್ಕೆ ಸೌಜನ್ಯವೇ ಭೂಷಣ.

–ಭರ್ತೃಹರಿ

★ ಪುರುಷ ಮತ್ತು ಮಹಿಳಾ ಅಧಿಕಾರಿಗಳು ಒಂದೇ ಬಗೆಯ ಕೆಲಸ ಮಾಡುತ್ತಾರೆ. ಹಾಗಾಗಿ ಪುರುಷರಂತೆ ಅವರೂ ಸವಲತ್ತು ಕೇಳಿದರೆ ಅದು ದಾನ ಕೇಳಿದ ಹಾಗಲ್ಲ. ತಮ್ಮದೇ ಸಾಂವಿಧಾನಿಕ ಹಕ್ಕಿನ ಚಲಾವಣೆ ಕೇಳುತ್ತಾರೆ.

–ದೆಹಲಿ ಹೈಕೋರ್ಟ್

★ 'ನಾನೇ ಶುದ್ಧ, ಉಳಿದವರೆಲ್ಲ ಅಶುದ್ಧ' ಎಂದು ಭಾವಿಸುವುದು 'ಮೃಗೀಯ ರಾಕ್ಷಸೀ ಧರ್ಮ'.

–ಸ್ವಾಮಿ ವಿವೇಕಾನಂದ

★ ಏನೆಲ್ಲ ಒಳ್ಳೆಯ ಹಾಗೂ ಶ್ರೇಯಸ್ಕರ ಕಾರ್ಯ ಮಾಡಬೇಕು. ಮಾಡಿದ ಕಾರ್ಯಗಳ ಮರೆತು ಮಾಡದಂತಿರಬೇಕು.

–ಸಿದ್ದೇಶ್ವರ ಸ್ವಾಮಿಗಳು

★ ಯಾರು ಅನ್ಯಾಯವಾಗಿ ವಿನಾಕಾರಣ ಒಬ್ಬನನ್ನು ಕೊಲ್ಲುವನೋ, ಜೀವಕ್ಕೆ ಜೀವ ತೆಗೆದುಕೊಳ್ಳುವನೋ ಅವನು ಸೃಷ್ಟಿಯಲ್ಲಿರುವ ಎಲ್ಲರ ಕೊಲೆಗೈದಂತೆ. ಅಂತಹವನಿಗೆ ಘೋರ ಶಿಕ್ಷೆ ಕಾದಿದೆ.

–ಕುರಾನ್

★ ಕಲೆಯ ಉತ್ಕರ್ಷಕ್ಕಾಗಿ ಕಲಾವಿದನನ್ನು ಸಮಾಜ ಪ್ರೋತ್ಸಾಹಿಸುವುದು ಕಲಾವಿದನ ಭಾಗ್ಯ.

–ಕೆರೆಮನೆ ಶಿವರಾಮ ಹೆಗಡೆ

★ ಐಶ್ವರ್ಯವನ್ನು ಉತ್ಪಾದಿಸದೆ ಅದನ್ನು ಅನುಭವಿಸಲು ಯಾರಿಗೂ ಹಕ್ಕಿಲ್ಲ.

–ಜಾರ್ಜ್ ಬರ್ನಾರ್ಡ್ ಷಾ